| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 241/2018**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 2

ಸಾಕ್ಷಿದಾರರ ಹೆಸರು : ಯಂಕಪ್ಪ
ತಂದೆಯ ಹೆಸರು : ಬಸಪ್ಪ
ಪ್ರಾಯ : 33 ವರ್ಷ
ಉದ್ಯೋಗ : ಕೂಲಿ
ವಾಸ : ಹುಚ್ಚನೂರು

ದಿನಾಂಕ 24.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿಯ ಪರಿಚಯವಿಲ್ಲ.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು 2-3 ವರ್ಷಗಳ ಹಿಂದೆ ಹುಚ್ಚನೂರಿನ ನಮ್ಮ ಮನೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಆರೋಪಿಯು ಚಾಸಾ-1 ರವರಿಗೆ ಹಲ್ಲೆ ಮಾಡಿದ ಘಟನೆಯ ಕುರಿತು ನನಗೆ ಗೊತ್ತಿಲ್ಲ. ಚಾಸಾ-1 ರವರು ನನ್ನ ಸಮಕ್ಷಮ ಯಾವುದೆ ಹಲ್ಲೆ ಘಟನೆಯ ಜಾಗವನ್ನು ತೋರಿಸಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೆ ಮಹಜರನ್ನು ಜರುಗಿಸಿ ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಯು ತಕ್ಷೀರು ಸ್ಥಳದ ಮಹಜರಾಗಿದ್ದು ನಿಪಿ-2 ಎಂದು, ಸಾಕ್ಷ್ಯಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಮು.ಮಾ.1/ಕತ್ತಿಯ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಹಿ ನನ್ನದಲ್ಲ. ಸದರಿ ಕತ್ತಿಯನ್ನು ಈ ಹಿಂದೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು</u>** : **<u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>**

ದಿನಾಂಕಃ26/6/2017 ರಂದು ಬೆಳಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ-1 ರವರು ಹುಚ್ಚನೂರು ಗ್ರಾಮದಲ್ಲಿರುವ ತನ್ನ ಮನೆಗೆ ಹೋಗಿ ಬಾಗಿಲು ಬೀಗ ತೆಗೆಯುತ್ತಿರುವಾಗ ಆರೋಪಿಯು ಅಲ್ಲಿಗೆ ಬಂದು ಚಾಸಾ-1 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಕತ್ತಿಯಿಂದ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ ಕುರಿತು ಮಹಜರು ಜರುಗಿಸುವ ಸಲುವಾಗಿ ದಿನಾಂಕಃ27/6/2017 ರಂದು ಪೋಲಿಸರು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದು ಮತ್ತು ಅಲ್ಲಿ ಚಾಸಾ-1 ರವರು ಸ್ಥಳ ತೋರಿಸಿದಂತೆ ನನ್ನ ಸಮಕ್ಷಮ ಬೆಳಗ್ಗೆ 9.40 ರಿಂದ 10.30 ಗಂಟೆಯವರೆಗೆ ನಿಪಿ-2 ರಂತೆ ತಕ್ಷೀರು ಸ್ಥಳದ ಮಹಜರನ್ನು ಜರುಗಿಸಿದ್ದು ಮತ್ತು ಸದರಿ ಮಹಜರಿಗೆ ನಾನು ಪಂಚರನಾಗಿ ನಿಪಿ-2(ಎ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ಮಹಜರನಡಿಯಲ್ಲಿ ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1/ಕತ್ತಿಯನ್ನು ಸ್ವಾದೀನಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>** : ಆರೋಪಿ ಪರ : ಶ್ರೀ ಎಸ್ ಡಿ ಎಮ್ ವಕೀಲರಿಂದ :

ನನ್ನ ಮತ್ತು ಆರೋಪಿಯ ಮನೆಯ ನಡುವೆ ಸುಮಾರು 500 ಮೀಟರ್ ಅಂತರವಿದೆ. ನನ್ನ ಮನೆ ಊರಿನಿಂದ ಹೊರಗೆ ಇದೆ ಎಂದರೆ ಸರಿ.

**ಮರುವಿಚಾರಣೆ : ಇಲ್ಲ**

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ